International Journal of Kannada Research 2023; 9(2): 36-38




International Journal of Kannada Research
www.kannadajournal.com

ISSN: 2454–5813
IJKR 2023; 9(2): 36-38
© 2023 IJKR
www.kannadajournal.com
Received: 02-02-2023
Accepted: 04-03-2023

**ಡಾ. ಎನ್. ಆರ್ ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ರಾಜ್ಯ
ಮುಕ್ತವಿಶ್ವವಿದ್ಯಾನಿಲಯ
ಕನ್ನಡ ಅಧ್ಯಯನ ಮತ್ತು
ಸಂಶೋಧನಾ ವಿಭಾಗ
ಮುಕ್ತಗಂಗೋತ್ರಿ, ಮೈಸೂರು,
ಕರ್ನಾಟಕ, ಭಾರತ

**ಮಂಜುಳ ಎಲ್**
ಸಹಾಯಕ ಪ್ರಾಧ್ಯಾಪಕರು,
ಕನ್ನಡವಿಭಾಗ ಬಿ.ಎಂ.ಎಸ್
ಮಹಿಳಾ ಮಹಾವಿದ್ಯಾಲಯ
ಬಸವನಗುಡಿ, ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಎನ್. ಆರ್ ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ರಾಜ್ಯ
ಮುಕ್ತವಿಶ್ವವಿದ್ಯಾನಿಲಯ
ಕನ್ನಡ ಅಧ್ಯಯನ ಮತ್ತು
ಸಂಶೋಧನಾ ವಿಭಾಗ
ಮುಕ್ತಗಂಗೋತ್ರಿ, ಮೈಸೂರು,
ಕರ್ನಾಟಕ, ಭಾರತ

# ಭಾರತೀಯ ಭಕ್ತಿ ಸಾಹಿತ್ಯದಲ್ಲಿ "ಸಂತ ಶಿಶುನಾಳ ಶರೀಫರ : ಗಿರಣಿ ವಿಸ್ತಾರ ನೋಡಮ್ಮ ತತ್ವಪದ ಒಂದು ಅವಲೋಕನ"

**ಡಾ. ಎನ್. ಆರ್ ಚಂದ್ರೇಗೌಡ, ಮಂಜುಳ ಎಲ್**

**ಪೀಠಿಕೆ**

ತತ್ವಪದಗಳ ಮೂಲಕ ನಾಡಿನಲ್ಲಿ ಹೆಸರಾದವರು ಶಿಶುನಾಳ ಷರೀಫರು. ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳ ಎಂಬ ಹಳ್ಳಿಯಲ್ಲಿ ಜನಿಸಿದ, ದೇವಕಾರ ಮನೆತನದ ಇಮಾಮ ಹಜರತ್ ಸಾಹೇಬ ಹಾಗೂ ಹಜ್ಜೂಮಾ ದಂಪತಿಗಳ ಮಗನಾಗಿ ಕ್ರಿ.ಶ ೧೮೧೯ರಲ್ಲಿ ಜನಿಸಿದರು. ಗೋವಿಂದ ಭಟ್ಟರು ಇವರ ಗುರುಗಳು.

ಭಾರತೀಯರು ಬ್ರಹ್ಮತತ್ವವನ್ನು ಆಧರಿಸಿ ನಿಂತ ಸಂತರನ್ನು ಮೆಚ್ಚಿ ಆರಾಧಿಸುತ್ತಾರೆ. ಜನಸಾಮಾನ್ಯರ ವರಕವಿ ಶರೀಫರ ಸಾಹಿತ್ಯ ಶ್ರೀಮಂತವಾದುದ್ದಾಗಿದೆ. ಶತಮಾನಗಳಿಂದ ಬೇರುಬಿಟ್ಟಿರುವ ಮತೀಯ ಭಾವನೆಗಳನ್ನು ಆಚರಣೆಗಳನ್ನು ಕಿತ್ತೊಗೆಯುವುದು ಸುಲಭದ ಮಾತಲ್ಲ. ಜಾತ್ಯತೀತ ಸಮಾಜ ನಿರ್ಮಾಣವೊಂದೆ ನಮ್ಮನ್ನು ಸುರಕ್ಷಿತವಾಗಿಡಬಲ್ಲದು ಎಂಬುದನ್ನು ಸ್ವಾತಂತ್ರ್ಯ ಪೂರ್ವದಲ್ಲೇ ಗ್ರಹಿಸಿದ ವಿಚಾರವಂತರು.

ಭಕ್ತಿ ನೀತಿಗಳನ್ನು ಮೇಳೈಸಿ □ದೇವನೊಬ್ಬ, ನಾಮ ಹಲವು□ ಎಂದು ತಮ್ಮ ಚಿಂತನೆಗಳಲ್ಲಿ ಹರಿಹರ, ಹಜರತ ಮಾರ್ಗಗಳೆಲ್ಲ ದೇವರನ್ನು ಸೇರುವ ದಾರಿಗಳೆಂದು ತಿಳಿಸಿ, ಆ ಮೂಲಕ ಹಿಂದು–ಮುಸ್ಲಿಂ ಸಂಸ್ಕೃತಿಯ ಐಕ್ಯತೆಗೆ ಕಾರಣರಾಗಿ ಕೋಮು ಸೌಹಾರ್ದ ನೆಲೆಗಟ್ಟಿನ ಮೇಲೆ ಸಮಾಜವನ್ನು ತಿದ್ದುವ ಕೆಲಸವನ್ನು ಶರೀಫರು ಮಾಡಿದ್ದಾರೆ. ಕ್ರಿ.ಶ ೧೮೫೦–೧೮೬೦ರ ದಶಕದಲ್ಲಿ ಬ್ರಿಟೀಷರು ಭಾರತಕ್ಕೆ (ಕರ್ನಾಟಕದ ಹುಬ್ಬಳ್ಳಿಗೆ) ಹತ್ತಿಗಿರಣಿಯನ್ನು ತಂದರು. ಇದು ನಮ್ಮ ನಾಡಿನ ಜನರಿಗೆ ವಿಸ್ಮಯವಾಗಿ ಕಾಣಿಸುತ್ತದೆ. ಅಂದಿನ ಕಾಲಕ್ಕೆ ಈ ತಂತ್ರಜ್ಞಾನ ಜನತೆಯನ್ನು ಇನ್ನಷ್ಟು ಕುತೂಹಲಕ್ಕೀಡುಮಾಡಿತು. ಈ ತತ್ವಪದದಲ್ಲಿ ಶರೀಫರು ಮೂರು ನೆಲೆಗಳಲ್ಲಿ, ಭೌತಿಕವಾದ ಹತ್ತಿಗಿರಣಿಯ ರಚನೆಯನ್ನು, ದೇವರ ನಿರ್ಮಾಣವಾದ ಮಾನವ ಶರೀರವೆಂಬ ಗಿರಣಿಯನ್ನು, ಬ್ರಹ್ಮನಿಂದ ನಿರ್ಮಾಣವಾದ ಇಡೀ ಬ್ರಹ್ಮಾಂಡವೇ ಗಿರಣಿಯ ಸ್ವರೂಪವನ್ನು ಪಡೆದುಕೊಂಡಿರುವ ರಚನೆಯನ್ನು ಕುರಿತು ಭೌತಿಕ ಮತ್ತು ಆಧ್ಯಾತ್ಮಿಕ ನೆಲೆಗಳಲ್ಲಿ ಶೋಧಿಸುತ್ತಾರೆ.

ಶರೀಫರಂತ ಸಂತರು ಈ ನಾಡಿಗೆ ಇಂದಿಗೂ ಪ್ರಸ್ತುತರಾಗಿರುವುದು ಅವರು ಸಾರಿದ, ತೋರಿದ, ಬೆಳೆಸಿದ, ಆಶಿಸಿದ ತತ್ವಗಳಿಂದ. ಐಕ್ಯತೆ ಹಾಗೂ ಸೌಹಾರ್ದವನ್ನು ಬೆಳೆಸಿಕೊಳ್ಳಲು ಅವರ ವೈಚಾರಿಕ ತತ್ವಪದಗಳು ನೀಡುವ ಕರೆ ಸ್ಮರಣೀಯ. □ಶಿಶುನಾಳಾಧೀಶ□ ಎಂಬ ಅಂಕಿತದಿಂದ ಸಂಖ್ಯಾ ತತ್ವ ಪದಗಳನ್ನು ಮತ್ತು ಅನುಭಾವ ಪದಗಳನ್ನು ರಚಿಸಿ, ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದಿದ್ದಾರೆ.

ಭೌತಿಕತೆಯಿಂದ ಅಧ್ಯಾತ್ಮದ ಕಡೆ ಹೋಗುವಂತಹ ವಿಸ್ತೀರ್ಣತೆಯನ್ನು ಕಟ್ಟಿಕೊಡುವ ಹಲವಾರು ತತ್ವಪದಗಳನ್ನು ಸೃಜಿಸಿದ್ದಾರೆ. ಇಂತಹ ತತ್ವಪದಗಳಲ್ಲಿ □ಗಿರಣಿವಿಸ್ತಾರ ನೋಡಮ್ಮ□ ಎಂಬುದು ಪ್ರಮುಖವಾದುದ್ದಾಗಿದೆ.

ಇಲ್ಲಿ ಶರೀಫರು ದೇಹದ ಸ್ವರೂಪವನ್ನು, ಕಾಯದ ಕಾರ್ಯವೈಖರಿಯನ್ನು ಹತ್ತಿ ಬಟ್ಟೆಯನ್ನು ಸಿದ್ಧಗೊಳಿಸುವ ಗಿರಣಿಗೆ ಹೋಲಿಸಿ ತತ್ವಪದವನ್ನು ಹಾಡಿದ್ದಾರೆ. ಮನುಷ್ಯನ ಮೇಧಾವಿತನದಿಂದ ಗಿರಣಿಯು ಸ್ಥಾಪಿಸಲ್ಪಟ್ಟಿದೆ. ಬಟ್ಟೆ ನೇಯುವ ಕಾಯಕದ ಮೂಲಕ ಒಂದು ಯಂತ್ರ ಕ್ರಿಯೆಯನ್ನು, ಆ ಯಂತ್ರ ಕ್ರಿಯೆಯಿಂದ ಬಟ್ಟೆಯ ಉತ್ಪನ್ನವಾಗುತ್ತದೆ. ಈ ಯಂತ್ರ ಮತ್ತು ಬಟ್ಟೆಯ ನಡುವೆ ಕಚ್ಚಾ ಹತ್ತಿಯು (ಅರಳೆ) ತನ್ನ ರೂಪವನ್ನು ಕಳೆದುಕೊಂಡು ನಮ್ಮ ಮಾನ ಮುಚ್ಚುವ ಕ್ರಿಯೆಗೆ ಕಾರಣವಾದ

ಬಗೆಯಾಗಿದೆ. ಈ ಗಿರಣಿಯು ಹೊಗೆ ಉಗುಳುವ ಕಂಬಗಳನ್ನು, ಹೊಗೆಯ ನೆರಳನ್ನು ಹೊಂದಿರುತ್ತದೆ.

ಮೂರ್ತ ರೂಪದ ಭೌತಿಕ ವಸ್ತು ಸ್ಥಿರದ್ದು. ಅದನ್ನು ಅಳೆಯಬಹುದು. ಆದರೆ ಮನುಷ್ಯನ ಅಂತರಂಗದ ಚೈತನ್ಯದ ಹೃದಯ ವೈಶಾಲ್ಯ, ಬೌದ್ಧಿಕ ಸಾಮರ್ಥ್ಯ, ಆನುಭಾವಿಕ ಔನ್ನತ್ಯ, ಅಮೂರ್ತ ಮತ್ತು ಸೀಮಾತೀತವಾದದ್ದು. ಹೀಗೆ ನಮ್ಮ ಮಾನ ಮುಚ್ಚುವ ಅಂತರಾತ್ಮವನ್ನು ಹೆಚ್ಚಿಸುವ ದೇವಾಂಗ ಋಷಿಯ ನೇಯ್ಗೆಯ ಕಾಯಕವನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ. ಕವಿಯು ಈ ತತ್ವಪದದಲ್ಲಿ ಮಾನವ ನಿರ್ಮಿತ ಭೌತಿಕ ಗಿರಣಿಯನ್ನು, ಶರೀರವೆಂಬ ದೇವ ನಿರ್ಮಿತ ಗಿರಣಿಯ ಬಗ್ಗೆ ಸಮೀಕರಿಸಿ ಆಶಯವನ್ನು ತಿಳಿಸಹೊರಟಿದ್ದಾರೆ. ಭೂಮಿ ಮತ್ತು ಆಕಾಶದ ಪರಿಕಲ್ಪನೆಯಲ್ಲಿ ಸೃಷ್ಟಿಯಾಗುವ ಬ್ರಹ್ಮಾಂಡವೆಂಬ ಗಿರಣಿಯ ಚಲನೆಯ ಬಗ್ಗೆಯೂ ಪ್ರಸ್ತಾಪ ಮಾಡುತ್ತಾರೆ.

> □ಗಿರಣಿ ವಿಸ್ತಾರ ನೋಡಮ್ಮ
> ಶರಣಿ ಕೂಡಮ್ಮ
> ಧರಣೀಶ ರಾಣಿ
> ಕರುಣದಿ ರಾಜ್ಯಕ
> ತರಿಸಿದ ಘನಚೋದ್ಯವೇ,ಚೀನಾದ ವಿದ್ಯವೋ□

ಗಿರಣಿಯ ವಿಸ್ತಾರ ಬಲು ದೊಡ್ಡದ್ದು. ಅಣುವಿನ ವಿಸ್ತಾರದಂತೆ ಅಲ್ಲಿನ ಅಣುವು ಬ್ರಹ್ಮಾಂಡದಷ್ಟು ವಿಸ್ತಾರವಾದದ್ದು. ಇದನ್ನು ಶರಣೆಯೊಂದಿಗೆ ಹೇಳುತ್ತಿದ್ದಾರೆ. ಶರಣೆ ಎಂದರೆ ಶರಣತ್ವ ಹೊಂದಿದ ತಾಯಿ, ಭಗವತಿ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಎಂಬ ಐಕ್ಯಸ್ಥಲಕ್ಕೆ ಏರಿದ ಶರಣೆ. ಬ್ರಿಟೀಷರ ರಾಣಿ ತಂದ ಗಿರಣಿಯನ್ನು ಅಥವಾ ಧರಣೀಪತಿಯ ರಾಣಿ ಪಾರ್ವತಿ ಈ ಭೂಮಂಡಲ ರಚನೆಗೆ ಕಾರಣಕರ್ತಳಾಗಿದ್ದಾಳೆ. ಈ ಪಾರ್ವತೀದೇವಿಯೇ ಪ್ರಕೃತಿಯೂ ಕೂಡ, ಇವಳು ಸತ್ವ, ರಜೋ ತಮೋಗುಣಗಳಿಗೆ ಅಂದರೆ ತ್ರಿಗುಣಗಳಿಗೆ ಕಾರಣಳಾಗಿದ್ದಾಳೆ. ಜ್ಞಾನ, ಕರ್ಮೇಂದ್ರಿಯಗಳಿಗೂ ಇವಳೇ ಕಾರಣ ಎಂದು ನಮ್ಮ ತತ್ವಶಾಸ್ತ್ರ, ಸಂಖ್ಯಾಶಾಸ್ತ್ರ ತಿಳಿಸುವುದು ಎಂದು ಈ ಪದ್ಯ ತಿಳಿಸುತ್ತದೆ. ಕರುಣೆಯ ಆಟದ ಈ ಭೂಮಂಡಲದಲ್ಲಿ ಕ್ರಿಯೆ ಎಂಬುದು ಸೃಷ್ಟಿಯಾಗುತ್ತದೆ. ಕರುಣೆ ಇಲ್ಲದ ನಾಡಿನಲ್ಲಿ ಕ್ರಿಯೆ ಎಂಬುದು ಸೃಷ್ಟಿಯಾಗಲಾರದು. ರೇಷ್ಮೆಯ ಹುಳುವಿನಿಂದ ಸೃಷ್ಟಿಯಾಗುವ ವಸ್ತು, ಈ ನೂಲಿನಿಂದ ಬಂದ ವಿದ್ಯೆ ಈ ರಾಜ್ಯಕ್ಕೆ ಬಂದದ್ದು. ಘನವಾದದ್ದು. ಪಾರ್ವತಿ ಈ ಲೌಕಿಕ ಬದುಕಿಗೆ ತರಿಸಿರುವ ವಿದ್ಯೆ ಘನತತ್ವದ್ದು. ಹುಳು ಕಲ್ಮಶ ಕಳೆದು ಹೊಸ ವಸ್ತುವಿಗೆ ಆಕಾರ ನೀಡುವ ಕ್ರಿಯೆ ಈ ಗಿರಣಿಯ ಸೃಷ್ಠಿಗೆ ಕಾರಣವಾದದ್ದು.

ಗಿರಣಿಗಳ ಕ್ರಿಯೆಯನ್ನು ಷರೀಫರು ಆನುಭಾವಿಕ ನೆಲೆಯಲ್ಲಿ ಕಟ್ಟಿಕೊಡುವರು. ಗಿರಣಿಯ ಚಿತ್ರಣವನ್ನು ಅನೇಕ ನೆಲೆಗಳಲ್ಲಿ ವಿಸ್ತರಿಸಿದ್ದಾರೆ.

> □ಜಲ ಅಗ್ನಿ ವಾಯು ಒಂದಾಗಿ
> ಕಲೆತು ಚಂದಾಗಿ
> ಜಲ ಅಗ್ನಿ ವಾಯು ಒಂದಾಗಿ
> ನೆಲದಿಂದ ಗಗನಕ್ಕೆ ಮುಟ್ಟದಂತೆಸೆವುದು
> ಚೆಲುವ ಚೆನ್ನಿಗವಾದ ಕಂಭವೋ ಹೊಗಿಯ ಬಿಂಬವೋ□

ಅವುಗಳೇ ಜಲ, ಅಗ್ನಿ, ವಾಯು. ಹತ್ತಿ ಗಿರಣಿಗೆ ನೀರು, ಬೆಂಕಿ, ವಾಯುವಿನ ವೇಗ ಬೇಕೆಂಬ ವಾಚ್ಯಾರ್ಥದ ಗ್ರಹಿಕೆ ಈ ಮಾತಿನಲ್ಲಿದೆ. ಈ ಜಗತ್ತೆಂಬ ಗಿರಣಿ ನಿರ್ಮಾಣವಾಗಿರುವುದು ಪಂಚಭೂತಗಳಿಂದ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಎಂದು ಶರೀಫರು ಹೇಳುತ್ತಾರೆ. ಜಲ, ಅಗ್ನಿ, ವಾಯು ಈ ಮೂರು ಸಂಗತಿಗಳು ಪೃಥ್ವಿ ಆಕಾಶಗಳ ನಡುವೆ ಇರುವುದನ್ನು ಗಮನಿಸಬಹುದು. ಈ ಎರಡು ತತ್ವಗಳನ್ನು ಷರೀಫರು ಚಿತ್ರಿಸುತ್ತಾರೆ. ಪಂಚಭೂತದ ಗಿರಣಿ ಸುಂದರವಾದದ್ದು ಮತ್ತು ಚೆಲುವಾದದ್ದು. ಸತ್ಯಂ, ಶಿವಂ, ಸುಂದರಂ ಎಂಬ ಮಾತಿನ ಮೌಲ್ಯವನ್ನು ತಿಳಿಸುತ್ತಾರೆ. ಅದು ಎಷ್ಟು ವಿಸ್ತಾರವಾದದ್ದು ಎಂಬುದನ್ನು ವಿವರಿಸುತ್ತಾರೆ. ನೆಲದಿಂದ ಗಗನಕ್ಕೆ ಮುಟ್ಟದಂತೆ ಅದರ ಅಗಾಧತೆಯನ್ನು ಕಣ್ಮುಂದೆ ತರುತ್ತಾರೆ.

ಈ ಶೋಭಿಸುವ ಗಿರಣಿಯ ಆಕಾರ ಹೇಗಿದೆ ಎಂದರೆ ಒಳಗೊಂದು, ಹೊರಗೊಂದು ಚಮತ್ಕಾರದಿಂದ ಕೂಡಿದೆ. ಹೊರಗಿರುವ ಆಕಾರ ಮೀರಿ ಅಂತರಂಗ ಪ್ರವೇಶಿಸಿದರೆ ಅದರ ಆಕಾರ ಚಿತ್ರ ದೊರಕುತ್ತದೆ.

> □ಒಳಗೊಂದು ಬೇರೆ ಆಕಾರ
> ತಿಳಕೋ ಚಮತ್ಕಾರ
> ಒಳಗೊಂದು ಬೇರೆ ಆಕಾರ
> ಒಂಬತ್ತು ದಳ ಚಕ್ರ ಸುಳಿವ ಸೂತ್ರಧಾರ
> ಲಾಳಿ ಮೂರು ಕೊಳವಿಯೊಳು, ಎಳೆತುಂಬತದರೊಳು□

ಒಳಗಿನ ಆಕಾರ ಹೇಗಿದೆ ಎಂದರೆ ದಳಗಳು ೯. ಶರೀರದಲ್ಲಿ ೯ ರಂಧ್ರ ಅಂದರೆ ತೂತುಗಳಿಂದ ನಿರ್ಮಾಣವಾಗಿದೆ. ೨ ಕಿವಿ, ೨ ಮೂಗಿನ ಹೊಳ್ಳೆಗಳು, ೨ ಕಣ್ಣು, ೧ ಬಾಯಿ, ೧ ಜನನೇಂದ್ರಿಯ, ೧ ಗುದದ್ವಾರದಿಂದ ಶರೀರವೆಂಬ ಗಿರಣಿಯ ರಚನೆಯಾಗಿದೆ. ಹಾಗೆಯೇ ಯೋಗ ವಿಜ್ಞಾನ ತಿಳಿಸುವಂತೆ ೬ ಚಕ್ರಗಳಿಂದ ನಿರ್ಮಾಣವಾಗಿದೆ. ಈ ಶರೀರ ಅವೆಂದರೆ ಆಧಾರ ಚಕ್ರ, ವಿಶುದ್ಧಿ ಚಕ್ರ, ಆಜ್ಞಾ ಚಕ್ರ. ಹೀಗೆ ಆಧಾರ ಚಕ್ರದಿಂದ ಆಜ್ಞಾ ಚಕ್ರ ಹುಬ್ಬಿನ ಮಧ್ಯಭಾಗಭಾಗದವರೆಗೆ ಶುಷುಮ್ನ ನಾಳದಿಂದ ನಮ್ಮ ಆಂತರ್ಯ ಶಕ್ತಿಯನ್ನು ಮೇಲ್ಮುಖವಾಗಿ ಹರಿಸಿದಾಗ ಅದು ಕುಂಡಲಿ ನಯನವನ್ನು ತಲುಪುತ್ತದೆ. ಅಲ್ಲಿ ಅಮೃತದ ಗಡಿಗೆ ತಲುಪಿದಾಗ ಅದು ಕೊಡುವ ಆನಂದ ಬ್ರಹ್ಮಾನಂದ. ಅದೇ ಅಮೃತಾನಂದ, ಸಮಾಧಿಯ ಉತ್ತುಂಗ ನೆಲೆ.

ಈ ಗಿರಣಿಯಲ್ಲಿ ಸೂತ್ರಧಾರ ಇದ್ದಾನೆ. ಅಲ್ಲಿ ೯ ದಳದ ಚಕ್ರ ಚಲನೆ ಇದೆ. ಅಲ್ಲೊಂದು ದಾರವಿದೆ. ಅದು ಮೇಲೆತ್ತುವ ದಾರ ಕೆಳಗೆ ತಳ್ಳುವ ದಾರವಲ್ಲ. ನೀರನ್ನು ಮೇಲೆತ್ತುವ ದಾರದಂತೆ. ಹಾಗೆಯೇ ೯ ದಳ, ೬ ಚಕ್ರದ ದೇಹದ ಗಿರಣಿಯಲ್ಲೂ ಸೂತ್ರಧಾರನಿದ್ದಾನೆ. ಅವನು ದೇಹವನ್ನು ಹೇಗೆ ನಡೆಸುತ್ತಾನೆ ಎಂದರೆ ಲಾಳಿಯ ಮೂಲಕ ದಾರವನ್ನು ನೂಲುವಂತದ್ದು. ಹಾಸುನೂಲು – ಹೊಕ್ಕು ನೂಲುಗಳ ಕೂಡುವ ಕ್ರಿಯೆಯಿಂದ ಬಟ್ಟೆಯು ಸಿದ್ಧವಾಗುವುದು.

> □ಅಲ್ಲಿ ಬರದಿಟ್ಟರಳಿ ಹಿಂಜಿ
> ಅಲ್ಯಾದವು ಹಂಜಿ
> ಅಲ್ಲಿ ಬರದಿಟ್ಟರಳಿಹಿಂಜಿ
> ಗಾಲಿಯೆರಡರ ಮೇಲೆ ಮೂಲಬ್ರಹ್ಮದ ಶೀಲ
> ನಾಡಿ ಸುಷುಮ್ನನು ಕೂಡಿ, ಆಯ್ತೋ ಕುಕ್ಕಡಿ□

ಹೀಗೆ ಹತ್ತಿಯನ್ನು ಹಿಂಜಿ, ಬೀಜ ತೆಗೆದು ಕೊಳೆಯನ್ನು ತೆಗೆದು ಶುದ್ಧಗೊಳಿಸಿ ದಾರವನ್ನಾಗಿ ಮಾಡಿ, ದಾರವನ್ನು ಲಡಿಮಾಡಿ, ಲಡಿಯನ್ನು ಲಾಳಿಯಲ್ಲಿ ಹಾಕಿ, ಲಾಳಿಯನ್ನು ಮಗ್ಗದ ಗುಂಡಿಯಲ್ಲಿ ಹಾಕಿ ಮಗ್ಗದಲ್ಲಿ ನೇಯ್ದು ಬಟ್ಟೆ ಸಿದ್ಧಪಡಿಸುವ ಕ್ರಿಯೆ. ಇದು ಹೊರಗಿನ ಬಟ್ಟೆ ಸಿದ್ಧಪಡಿಸುವ ಕ್ರಿಯೆಯೂ ಹೌದು. ದೇಹದ ಬಟ್ಟೆಯನ್ನು ಮತ್ತು ಇಡೀ ಬ್ರಹ್ಮಾಂಡವನ್ನು ಸದ್ಧಪಡಿಸಿದ

ಕ್ರಿಯೆಯೂ ಹೌದು. ಹೀಗೆ ೩ ನೆಲೆಯಲ್ಲಿ ಗಿರಣಿಯ ವಿಸ್ತಾರವನ್ನು ಅರ್ಥೈಸಿಕೊಳ್ಳಬಹುದು.

'ಎಳೆ' ಇಳೆಯಾಗಿದೆ. ೩ ಕೊಳವೆಗಳಿವೆ. ಗೊರಣಿಯಲ್ಲಿರುವಂತೆ ದೇಹ, ಮಾತು, ಮನಸ್ಸು ಇವನ್ನು ತ್ರಿಕರಣಗಳು ಎನ್ನುವರು. ಮನುಷ್ಯನ ಬದುಕಿನ ಚಲನೆಗೆ ಇವು ಕಾರಣ ಕಾಯ, ವಾಚ, ಮನಸ್ಸು ಇವುಗಳ ಎಳೆಯಲ್ಲಿ ದಾರ ತುಂಬುತ್ತಾ ಹೋದಂತೆ, ಎಳೆಯಂತೆ ಬಟ್ಟೆ ಪಡೆಯುವಂತೆ ಎಳೆಯಂತೆಯೇ ಮನಸ್ಸು ಮಾತು ಬರುತ್ತದೆ.

ಇಹ ಪರಗಳ ನಡುವೆ ಒಂದು ನೂಲು ಎಳೆಯಬೇಕು. ಹಾಸು ನೂಲು ಮತ್ತು ಹೊಕ್ಕು ನೂಲುಗಳ ನಡುವೆ ಆಕಾಶ ಮತ್ತು ಭೂಮಿಯ ನಡುವೆ ನೂಲು ನೇಯುವ ಕ್ರಿಯೆ. ಇದೇ ಅಧ್ಯಾತ್ಮ. ನೆಲದಿಂದ ಮುಗಿಲವರೆಗೆ ನೇಯುವ ನೇಯ್ಗೆಗೆ ಬಟ್ಟೆಗಳು ಜಲ, ಅಗ್ನಿ, ವಾಯುಗಳು, ಆಕಾಶ – ಭೂಮಿ ನಡುವೆ ಅನಂತತೆಯ ಬಟ್ಟೆಯನ್ನು ಇವು ಹೆಣೆಯುತ್ತವೆ.

ಬಟ್ಟೆಯನ್ನು ನೇಯ್ಗೆ ಮಾಡುವ ನೇಕಾರ ೨ ಮಣೆಗಳ ಗಾಲಿಯನ್ನು ತುಳಿಯುವನು. ಗಾಲಿ ಎಂದರೆ ಭೂಮಿ ಮತ್ತು ಆಕಾಶ. ಹಾಗೆಯೇ ಜೀವ ಮತ್ತು ದೇಹ ಗಾಲಿಗಳ ಮೂಲಕ ಜೀವನದ ಬಟ್ಟೆ ನೇಯುತ್ತೇವೆ. ಬಟ್ಟೆಯ ನೇಯ್ಗೆಗೆ ಮತ್ತು ಅಂತರಂಗದ ಯೋಗದ ಬಟ್ಟೆಗೆ ಸಹಾಯ ಮಾಡುವುದು ನೂಲು. ಸುಷುಮ್ನ ನಾಡಿಯ ಮೂಲಕ ಆಧಾರ ಚಕ್ರದ ಶಕ್ತಿಯನ್ನು ಸಹಸ್ರಾರದವರೆಗೆ ಮೇಲೆತ್ತಿ ಯೋಗ ಸಮಾಧಿ ಸಿದ್ಧಿಯನ್ನು ಪಡೆಯುವುದು. ಹೀಗೆ ಕುಕ್ಕಡಿ ಅಂದರೆ ನೂಲಿನ ಉಂಡೆ ಸಿದ್ಧವಾಗುತ್ತದೆ.

> □ಪರಮನೆಂಬುವ ಪಟ್ಟೇವ ಅಲ್ಲೆ
> ಮಾರಾಕಿಟ್ಟಾವ
> ಪರಮನೆಂಬುವ ಪಟ್ಟೇವ
> ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ
> ನೇಸಿ ಹಚ್ಚಡ ಹೊಚ್ಚಿತೋ, ಲೋಕ ಮೆಚ್ಚಿತೋ□

ನೂಲಿನಿಂದ ಬಟ್ಟೆ ಸಿದ್ಧವಾಗುವುದು, ಅದೇ ಅಧ್ಯಾತ್ಮದ ಧ್ಯಾನದಿಂದ ಭಗವಂತನ ರೇಷ್ಮೆಯ ಬಟ್ಟೆ ಸಿದ್ಧವಾಗುವುದು ಘನತತ್ವದ ಬಟ್ಟೆ ತಯಾರಿಸಿದವ ದೇವಾಂಗ ಋಷಿಗೆ ಸಲ್ಲುವುದು. ಹೀಗೆ ಸಿದ್ಧಪಡಿಸಿದ ಬಟ್ಟೆಯ ಕೊಳ್ಳಲು ವ್ಯಕ್ತಿಗೆ, ಶಕ್ತಿ, ಭಕ್ತಿ ಹಾಗೂ ಅಧ್ಯಾತ್ಮ ಯೋಗ್ಯತೆ ಬೇಕು. ಈ ಬಟ್ಟೆ ಮಾನ ರಕ್ಷಣೆಗಾಗಿ ಇರುವಂತದ್ದು. ಭಗವಂತ ಭಕ್ತ ಎಂಬ ಕಳ್ಳುಬಳ್ಳಿಯ ಸಂಬಂಧವನ್ನು ವಿವರಿಸುತ್ತದೆ. ಶಿವತತ್ವದ ನೆಲೆಗೆ ಏರುವ ಬದುಕು ಇದಕ್ಕಾಗಿ ಭಕ್ತಿಯ ಶಕ್ತಿ ಬೇಕು. ಬ್ರಿಟೀಷರ ಬಟ್ಟೆಗೆ ಬೆಲೆ ಕಟ್ಟಬಹುದು. ಆದರೆ ಈ ಅಧ್ಯಾತ್ಮ ಬಟ್ಟೆಗೆ ಬೆಲೆ ಕಟ್ಟಲಾಗದು. ಲೋಕಕ್ಕೆ ಹಿಚ್ಚಿರುವ ಬಟ್ಟೆ ಇದು. ಆ ಮಾನ ಕಳೆದುಕೊಂಡರೆ ಬದುಕು ದು:ಖಮಯವಾದದ್ದು. ಕರುಣೆ ದಯೆಯಿಂದ ನೇಕಾರ ಬಟ್ಟೆ ನೇಯುತ್ತಾನೆ. ಈ ಹತ್ತಿಗೆ ಮರುಜನ್ಮವೆಂಬುದಿಲ್ಲ. ಇದೇ ತತ್ವಜ್ಞಾನವೆಂದು ಮಹಾ ಅನುಭಾವಿ ಶಿಶುನಾಳ ಷರೀಫರು ತಿಳಿಸುತ್ತಾರೆ.

ಸರ್ವಧರ್ಮ ಸಮನ್ವಯದ ದೊಡ್ಡ ಹೆಸರು. ಉತ್ತರದಲ್ಲಿ ಕಬೀರರು ಹೇಗೋ ಹಾಗೆ ಕರ್ನಾಟಕದಲ್ಲಿ ಶಿಶುನಾಳ ಷರೀಫರು ಸಹ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳ ಗ್ರಾಮದಲ್ಲಿ ಜನಿಸಿದರು. ದೇವಕಾರ್ ಮನೆತನದ ಹಿಮಾಮ್ ಹಜರತ್ ಸಾಹೇಬ್ ತಾಯಿ ಅಜ್ಜುಮಾ ಮಹಮನ್ ಶರೀಫ್ ಮೂಲ ಹೆಸರು. ಶಿಕ್ಷಕರಾಗಿ ಕೆಲಸ ನಂತರ ಅಧ್ಯಾತ್ಮದ ಕಡೆ ಒಲವು ಉಂಟಾಗಿ ಅನುಭಾವದ ಕಡೆ ನಡೆದವರು. ತತ್ವಪದಕಾರರು. ಅಜ್ಞಾನವನ್ನು ದೂರಮಾಡಿದವರು. ಬದುಕನ್ನು ಅನುಭಾವದ ಎತ್ತರಕ್ಕೆ ಬೆಳೆಸಿದವರು. ಕಳಶದ – ಗೋವಿಂದಭಟ್ಟರು, ಅಂಗಲಗಿಯ – ಅಡವಿಸ್ವಾಮಿಗಳು, ಗದಗದ ಮಡಿವಾಳಪ್ಪ, ನವಿಲುಗುಂದದ ನಾಗಲಿಂಗಜ್ಜ, ಹುಬ್ಬಳ್ಳಿಯ ಸಿದ್ಧರೂಢಸ್ವಾಮಿ ಕರ್ನಾಟಕದ ಇಂತಹ ಸಂತರ ಒಡನಾಟದಲ್ಲಿ ಸೇರಿಬೆಳೆದವರು.

ಷರೀಫರು ತತ್ವಪದಗಳ ರೂವಾರಿ. ತತ್ವಪದ ಎಂದರೆ ಜೀವನದಲ್ಲಿ ಮನುಷ್ಯ ಜೀವ ಮಾಡುವ ತಪ್ಪುಗಳನ್ನು ಯೋಚಿಸುವ ರೀತಿಯನ್ನು ಯಾವುದೋ ಒಂದು ಸನ್ನಿವೇಶಕ್ಕೆ ಹೋಲಿಸಿ ಹಾಡಿನಿಂದ ವಿವರಿಸುವುದು. ಪರಮಾತ್ಮರೂಪ ಪರಾತತ್ವವಾಗಲೀ, ಪರಮಾತ್ಮನ ಸಾಕ್ಷಾತ್ಕಾರದ ಯಾವುದೇ ಸಾಧನಗಳಾಗಲೀ ಮತ್ತು ಪರಮಾತ್ಮನ ದಿವ್ಯವಾಣಿ ರೂಪ ಸಂದೇಶವಾಗಲೀ ಇವು ಯಾವುದೋ ಒಂದು ಜನಾಂಗದ ಅಥವಾ ಯಾವುದೋ ಒಂದು ಸಂಪ್ರದಾಯದ ಸ್ವತ್ತು ಅಲ್ಲವೆಂದು ದಿಟ್ಟತನದಿಂದ ಶೋಧಿಸಿದವರು. ಸರ್ವಧರ್ಮ ಸಮನ್ವಯದ ಸಾಕಾರಮೂರ್ತಿಗಳಾಗಿ ಮೂಡಿಬಂದವರು. ಸಾಮಾಜಿಕ ಐಕ್ಯತೆಯ ಮೂಲಕ ಸರ್ವರಿಗೂ ಪರಮಾತ್ಮನೊಬ್ಬನೇ. ಆತನೇ ಮೂಲ ಜಗದ್ಗುರು. ಈತ ಕಾಲಕ್ಕೆ ಅತೀತ. ಈ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಒಳಪಟ್ಟವನಲ್ಲ. ತನ್ನ ತತ್ವಗಳಿಗೆ ಅನೇಕ ಶರಣ ಸಂತರನ್ನು ಸಾಧನವನ್ನಾಗಿ ಮಾಡಿಕೊಂಡ. ಆದರೆ ಜನರು ಮೂಲ ಪರಮಾತ್ಮನನ್ನು ಮರೆತು ಮಹಾತ್ಮರನ್ನೇ ಪೂಜಿಸಿದರು. ವ್ಯಕ್ತಿಪೂಜೆ ಖಂಡಿಸಿ ಸಮನ್ವಯ ಸಂದೇಶ ಸಾರಿದರು.

ಶರೀಫರು ೧೯ನೇ ಶತಮಾನದಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯ ತಾತ್ವಿಕತೆಯನ್ನು ಪಸರಿಸಿದ ಮಹಾನ್ ಸಂತ. ವ್ಯಷ್ಟಿಯಿಂದ ಸಮಷ್ಟಿ ಬಾಳುವೆಯ ಮಹಾತತ್ವವನ್ನು ಸಾರಿ ಜನಸಾಮಾನ್ಯರ ಮನಸ್ಸಿನಲ್ಲಿ ಇಂದಿಗೂ ನೆಲೆನಿಂತಂತಹ ಮಹಾನ್ ಚೇತನ ಸಂತ ಶಿಶುನಾಳ ಶರೀಫರಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು


೧. ಶಿಶುನಾಳ ಶರೀಫ ಸಾಹೇಬರ ತತ್ವಪದಗಳು : ಪ್ರಕಾಶಕರು : ಮೆ//ಪಿ.ಸಿ ಶಾಬಾದಿಮಠ ಬುಕ್ ಡಿಪೋ,
೨. ಗದಗ
೩. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕೋಶ : ಡಾ. ಚಿ.ಸಿ ನಿಂಗಣ್ಣ
೪. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ
೫. ೩. ಬೋಧ ಒಂದೇ ಬ್ರಹ್ಮನಾದ ಒಂದೇ : ಡಾ. ಮಂಜುಳಾ ಮಲ್ಹಾರಿ
೬. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೧೨